## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 886 |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ (ಪದವೀದರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.03.2020 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿರವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಬನಶಂಕರಿ 6ನೇ ಹಂತದ 4ನೇ 'ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ನಲ್ಲಿ ಹಾದು ಹೋಗಿರುವ ಕಾವೇರಿ ನೀರಿನ ಪೈಪ್‌ಲೈನ್‌ನ ಸುತ್ತಮುತ್ತ ಫೆನ್ಸಿಂಗ್‌ನ್ನು ಅಳವಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ: | ಸದರಿ ಜಾಗವು ಬೆಂಗಳುರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಯಲ್ಲಿದ್ದು ಈ ಜಾಗವನ್ನು BWSSBಗೆ ಹಸ್ತಾಂತರಿಸಲು ಪರಿಶೀಲಿಸಲಾಗುತ್ತಿದ್ದು, ಹಸ್ತಾಂತರಿಸಿದ ನಂತರ ಬೆಂಗಳೂರು ಜಲಮಂಡಳಿಯವತಿಯಿಂದ ಫೆನ್ಸಿಂಗ್ ಅಳವಡಿಸುವ ಕಾರ್ಯವನ್ನು ಮುಂದಿನ ಮೂರು ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದು. |
| ಆ) | ಇದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು: | |
| ಇ) | ಸದರಿ ಬಡಾವಣೆಯ ರಸ್ತೆಗಳಿಗೆ ಸಂಖ್ಯೆಯನ್ನು ಇದುವರೆವಿಗೂ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮೋದಿತ ಬಡಾವಣೆಗಳನ್ನು ಇನ್ನೂ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿರುವುದಿಲ್ಲ. ಹಸ್ತಾಂತರಿಸಿದ ನಂತರ ಬಡಾವಣೆಯ ರಸ್ತೆಗಳಿಗೆ ಸಂಖ್ಯೀಕರಣ ಮಾಡಿ ನಾಮಫಲಕವನ್ನು ಅಳವಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವತಿಯಿಂದ ಕ್ರಮಕೈಗೊಳ್ಳಲಾಗುವುದು. |
| ಈ) | ಇದರಿಂದ ಬಡಾವಣೆಯಲ್ಲಿನ ನಿವಾಸಿಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುವುದೇ: | ಈಗಾಗಲೇ ಆಯಾ ಬಡಾವಣೆಗಳಲ್ಲಿ ಬಡಾವಣೆಯ ನಕ್ಷೆಯ ಫಲಕಗಳನ್ನು ಅಳವಡಿಸಲಾಗಿದ್ದು, ಅಳವಡಿಸಿರುವ ಫಲಕಗಳಲ್ಲಿ ಅನುಮೋದಿತ ಬಡಾವಣೆ ನಕ್ಷೆಯೊಂದಿಗೆ ನಿವೇಶನ ಸಂಖ್ಯೆಗಳನ್ನೊಳಗೊಂಡಂತೆ ಗುರುತಿಸಲು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಅಡ್ಡರಸ್ತೆಗಳಲ್ಲಿ Arrow Sign Board ಗಳನ್ನು ಅಳವಡಿಸಿ ಆಯಾ ರಸ್ತೆಗಳಲ್ಲಿ ಬರುವ ನಿವೇಶನಗಳ ಸಂಖ್ಯೆಯನ್ನು ಬರೆಯಲಾಗಿರುತ್ತದೆ. |
| ಉ) | ಬಡಾವಣೆಯ ಹತ್ತಿರದಲ್ಲಿರುವ ತಲಘಟ್ಟಪುರ ಕೆರೆಯು ತ್ಯಾಜ್ಯಗಳಿಂದ ಮಲೀನವಾಗಿದ್ದು, ಅದರ ನಿರ್ವಹಣೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ: | ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ದಿನಾಂಕ:20-09-2019ರ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಕ್ರಿಯಾಯೋಜನೆಯಡಿಯಲ್ಲಿ Improvements to Thalaghattapura Lake ಕಾಮಗಾರಿಗೆ ರೂ.500.00 ಲಕ್ಷಗಳ ಅನುದಾನ ನೀಡಲಾಗಿದ್ದು, ಕೆರೆಯ ಸಮಗ್ರ ಅಭಿವೃದ್ಧಿಗಾಗಿ ಈಗಾಗಲೇ ಟೆಂಡರ್ ಅಹ್ವಾನಿಸಿದ್ದು ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿದೆ. |

| | | |
|---|---|---|
| | | |
| ಊ) | ಸದರಿ ಕೆರೆಯ ಸುತ್ತಮುತ್ತ ಹಾಗೂ ಬನಶಂಕರಿ 6ನೇ ಹಂತದ 4ನೇ 'ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ನಲ್ಲಿರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಇಲ್ಲವಾದಲ್ಲಿ ಯಾವಾಗ ಕ್ರಮ ಕೈಗೊಳ್ಳುವುದು: | ಬನಶಂಕರಿ 6ನೇ ಹಂತದ 4ನೇ 'ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ರಲ್ಲಿರುವ ಉದ್ಯಾನವನಗಳಿಗೆ ಪ್ರಾಧಿಕಾರದ ಅನುದಾನ ಲಭ್ಯತೆಯ ಮೇರೆಗೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಲು ಕ್ರಮಕೈಗೊಳ್ಳಲಾಗುವುದು. |
| ಋ) | ಬಡಾವಣೆಯಲ್ಲಿ ಅಳವಡಿಸಿರುವ Street Lights ಗಳು ತುಂಬಾ ಹಳೆಯದಾಗಿದ್ದು, ಪ್ರಕಾಶಮಾನ ಬೆಳಕು ಚೆಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ಬನಶಂಕರಿ 6ನೇ ಹಂತದ 4ನೇ 'ಟಿ' ಬ್ಲಾಕ್ ಮುಂದುವರೆದ ಬಡಾವಣೆಯಲ್ಲಿ ಈಗಾಗಲೇ Sodium Vapoor Street light ಗಳನ್ನು ಅಳವಡಿಸಲಾಗಿರುತ್ತದೆ. ಈ ಸಾಲಿನಲ್ಲಿ ಬನಶಂಕರಿ 6ನೇ ಹಂತದ ಬಡಾವಣೆಗೆ ಪ್ರಕಾಶಮಾನವಾಗಿ ಬೆಳಕು ಚೆಲ್ಲುವ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ರೂ.47.00 ಲಕ್ಷಗಳ ಅಂದಾಜು ಪಟ್ಟಿಗೆ ದಿನಾಂಕ:06.03.2020 ರಂದು ಆರ್ಥಿಕ ಸಹಮತಿಯನ್ನು ಪಡೆಯಲಾಗಿದ್ದು, ಮಾರ್ಚ್–2020 ಎರಡನೇ ವಾರದಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗುತ್ತದೆ. |
| ಎ) | ಇಲ್ಲಿನ ನಾಗರೀಕರು ಬಹುತೇಕ ವಿದ್ಯುತ್ ತೊಂದರೆಯನ್ನು ಅನುಭವಿಸುತ್ತಿದ್ದು, ಸೂಕ್ತ Transformsಅನ್ನು ಅಳವಡಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೇ: ಇದ್ದರೆ, ಯಾವಾಗ ಕ್ರಮಕೈಗೊಳ್ಳುವುದು : | ಸದರಿ ಬಡಾವಣೆಯಲ್ಲಿ ನಿವಾಸಿಗಳು ನಿರ್ಮಿಸಿರುವ ನಿವೇಶನಗಳಿಗೆ ಅನುಗುಣವಾಗಿ ಟ್ರಾನ್ಸಫಾರ್ಮರ್‌ಗಳನ್ನು ಅಳವಡಿಸಲಾಗಿರುತ್ತದೆ. ಇವುಗಳ ವಾರ್ಷಿಕ ನಿರ್ವಹಣೆಯನ್ನು ಪ್ರಾಧಿಕಾರದಿಂದ ನಿರ್ವಹಿಸಲಾಗುತ್ತಿರುತ್ತದೆ. |
| ಏ) | ರಾತ್ರಿ ಹೊತ್ತು ಮಂದ ಬೆಳಕು ಇರುವುದರಿಂದ ನಾಗರೀಕರು ಸದರಿ ಬಡಾವಣೆಯಲ್ಲಿ ಸಂಚರಿಸಲು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದು, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಬನಶಂಕರಿ 6ನೇ ಹಂತದ 4ನೇ 'ಟಿ' ಬ್ಲಾಕ್ ಮುಂದುವರೆದ ಬಡಾವಣೆಯ ಹೊಸದಾಗಿ ನಿವಾಸಿಗಳ ಕೋರಿಕೆಯ ಮೇರೆಗೆ ಪ್ರಕಾಶಮಾನವಾಗಿ ಬೆಳಕು ಚೆಲ್ಲುವ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ರೂ.47.00 ಲಕ್ಷಗಳ ಅಂದಾಜು ಪಟ್ಟಿಗೆ ದಿನಾಂಕ:06.03.2020 ರಂದು ಆರ್ಥಿಕ ಸಹಮತಿಯನ್ನು ಪಡೆಯಲಾಗಿದ್ದು, ಮಾರ್ಚ್–2020 ಎರಡನೇ ವಾರದಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗುತ್ತದೆ. |

ಸಂಖ್ಯೆ: ನಅಇ 47 ಬೆಂಭೂಸ್ವಾ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ